O.S.No.:70/2020
D.W.:1

ಈ ದಿನ ದಿಃ14.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಎಸ್.ವಿ.ವಿ ರವರಿಂದಃ-

1. ವೆಂಕಟಪ್ಪ ರವರು ಪುಟ್ಟಮರಿಗೌಡ ಮತ್ತು ಇತರರ ವಿರುದ್ದ ಈ ದಾವೆಯನ್ನು ಹೂಡಿರುತ್ತಾರೆ. ಈ ದಾವೆಯನ್ನು ಏನು ಪರಿಹಾರ ಕೋರಿ ಹೂಡಿದ್ದಾರೆಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾವ ಆಸ್ತಿಗೆ ಸಂಬಂಧಿಸಿದಂತೆ ಹೂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿ ನಮ್ಮ ಪಕ್ಕದ ಊರಿನವರು ಎಂದರೆ ಸರಿ. ನಾನು 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಇಂಗ್ಲೀಷಿನಲ್ಲಿ ಸಹಿ ಮಾಡುತ್ತೇನೆ.

2. 2015ನೇ ಸಾಲಿನಲ್ಲಿ ನನ್ನ ತಂದೆ, ನನ್ನ ತಾಯಿ ಮತ್ತು ನನ್ನ ಸಹೋದರ ಸಹೋದರಿಯರು ಸರ್ವೆ ನಂ.149/1ರಲ್ಲಿದ್ದ 1ಎಕರೆ 26 ಗುಂಟೆ ಜಮೀನನ್ನು ಮಾರಾಟ ಮಾಡಲು ವಾದಿಗೆ ಕೇಳಿಕೊಂಡಿದ್ದೆವು ಎಂದರೆ ಸರಿಯಲ್ಲ. 2015ನೇ ಸಾಲಿನಲ್ಲಿ ನಮಗೆ ಹಣಕಾಸಿನ ತೊಂದರೆ ಇತ್ತು ಎಂದರೆ ಸರಿ. ನಾನು ಚೀಟಿಯ ವ್ಯವಹಾರ ಮಾಡುತ್ತಿದ್ದೆ. 2015ನೇ ಸಾಲಿನಲ್ಲಿ ನನಗೆ ಚೀಟಿಯ ವ್ಯವಹಾರದಲ್ಲಿ ನಷ್ಟ ಉಂಟಾಗಿತ್ತು ಎಂದರೆ ಸರಿ. ನಮ್ಮ ಮನೆಯ ಹಣಕಾಸಿನ ಅವಶ್ಯಕತೆಗಳಿಗೋಸ್ಕರ ನಮಗೆ ಹಣದ ಅವಶ್ಯಕತೆ ಇದ್ದುದ್ದರಿಂದ ದಾವಾಸ್ವತ್ತನ್ನು

ವಾದಿಗೆ ದಿನಾಂಕ.09.07.2015ರಂದು ಮಾರಾಟ ಮಾಡಿ ಅದಕ್ಕೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಸಹ ನಾವುಗಳು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

3. ನಿಪಿ-1 ಕನ್ನಡದಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ-1ನ್ನು ತೋರಿಸಿ ಅದರಲ್ಲಿರುವ ಸಹಿಗಳು ನಿಮ್ಮ ಮತ್ತು ನಿಮ್ಮ ಸಹೋದರ ಸಹೋದರಿ ಹಾಗೂ ತಂದೆತಾಯಿಗಳದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾಖಲೆಯನ್ನು ನೋಡಿ ಹೌದು ಅವುಗಳು ನಮ್ಮ ಸಹಿಗಳೆ ಎಂದು ನುಡಿಯುತ್ತಾರೆ. ಸಾಕ್ಷಿಗಳ ಸಮಕ್ಷಮ ದಾವಾಸ್ವತ್ತನ್ನು 16 ಲಕ್ಷ 50ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿ ವಾದಿಯಿಂದ ಹಣವನ್ನು ಸಹ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1ಕ್ಕೆ ಮೋಟಯ್ಯಗೌಡ, ಈರಬೆಟ್ಟೇಗೌಡ, ಮಧುಕುಮಾರ್, ಸೊಂಬಲಿಂಗಯ್ಯ, ಪ್ರವೀಣ್ ಎನ್ನುವವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ.

4. ನಿಪಿ-1ನ್ನು ಕೆ.ಪಿ ಪೇರುಮಾಳಯ್ಯ ಎನ್ನುವವರ ಬಳಿ ನಾವುಗಳೆ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನಿಪಿ-1 ನ್ನು ಬರೆದುಕೊಟ್ಟ ದಿನವೇ ವಾದಿಯ ಸ್ವಾಧೀನಾನುಭವಕ್ಕೆ ಬಿಟ್ಟುಕೊಟ್ಟಿರುತ್ತೇವೆ ಎಂದು ನಿಪಿ-1ರಲ್ಲಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1ರ ಆಧಾರದ ಮೇಲೆ ದಾವಾಸ್ವತ್ತಿಗೆ ಸಂಬಂಧಿಸಿದ ಖಾತೆ ಪಹಣಿಗಳು ವಾದಿಯ ಹೆಸರಿಗೆ ಬರುತ್ತಿವೆ ಎಂದರೆ ಸರಿ.

ದಾವಾಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಸಹ ವಾದಿಯೇ ಕಟ್ಟುತ್ತಿದ್ದಾರೆ ಎಂದರೆ ಸರಿ.

5. ನನ್ನ ಪ್ರತಿವಾದ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಮ್ಮ ಮತ್ತು ವಾದಿಯ ಕುಟುಂಬದ ನಡುವೆ ಚೀಟಿಯ ವ್ಯವಹಾರವಿದ್ದು, ಆ ಚೀಟಿಯ ವ್ಯವಹಾರಕ್ಕೆ ಸಂಬಂಧಿಸಿದಂತೆ ನಮ್ಮಿಂದ ಹಣ ವಾಪಸ್ಸು ಕೊಡಲು ಸಾಧ್ಯವಾಗದೆ ಇದ್ದಾಗ ವಾದಿಯ ಕೋರಿಕೆಯ ಮೇರೆಗೆ ನಾವುಗಳು ಅವರಿಗೆ ಭದ್ರತೆಗೆಂದು ಒಂದು ಅಗ್ರಿಮೆಂಟನ್ನು ಬರೆದುಕೊಡುತ್ತೇವೆ ಎಂದು ತಿಳಿಸಿದ್ದು, ಆದರೆ ವಾದಿಯು ಅಗ್ರಿಮೆಂಟ್ ಬೇಡ ನಂಬಿಕೆಯ ಕ್ರಯಪತ್ರ ಬರೆದುಕೊಡಿ ಎಂದು ನಮಗೆ ತಿಳಿಸಿದ ಮೇರೆಗೆ ನಾವುಗಳು ಕೇವಲ ಭದ್ರತೆಗೆಂದು ವಾದಿಗೆ ನಂಬಿಕೆಯ ಕ್ರಯಪತ್ರ ಬರೆದುಕೊಟ್ಟಿರುತ್ತೇವೆ ಎಂಬ ಸಂಗತಿಯನ್ನು ನೀವು ನಿಮ್ಮ ಪ್ರತಿವಾದಪತ್ರದಲ್ಲಿ ಆಗಲೀ ಅಥವಾ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ಆಗಲೀ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

6. ಕ್ರಯಪತ್ರವಾದ ನಂತರ ಬಡ್ಡಿಯ ಹಣವನ್ನು ವಾದಿಗೆ ನಾವುಗಳು ಲಿಂಗರಾಜು ಎನ್ನುವವರ ಮೂಲಕ ಕೊಡುತ್ತಿದ್ದೆವು ಎಂಬ ಸಂಗತಿಯನ್ನು ನಾನು ನನ್ನ ಪ್ರತಿವಾದಪತ್ರದಲ್ಲಿ ಆಗಲೀ ಅಥವಾ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ಆಗಲೀ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ಈ ರೀತಿ ಲಿಂಗರಾಜು ರವರ

ಮೂಲಕ ವಾದಿಗೆ ನಾವು ಬಡ್ಡಿಯನ್ನು ಕೊಡುತ್ತಿದ್ದೆವು ಎಂಬ ಬಗ್ಗೆ ಯಾವುದೇ ದಾಖಲೆ ನನ್ನ ಬಳಿ ಇರುವುದಿಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಸ್ವಾಧೀನಾನುಭವಕ್ಕೆ ನಾವುಗಳು ತೊಂದರೆ ಕೊಟ್ಟಕಾರಣಕ್ಕೆ ವಾದಿಯು ನಮ್ಮ ವಿರುದ್ದ ಪೊಲೀಸ್ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಾವುಗಳು ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟ ಕಾರಣಕ್ಕೆ ವಾದಿಯು ನಮ್ಮ ವಿರುದ್ದ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

7. ಕ್ರಯದ ದಿನದಿಂದಲ್ಲೂ ದಾವಾಸ್ವತ್ತಿನಲ್ಲಿ ವಾದಿಯೇ ಸ್ವಾಧೀನಾನುಭವದಲ್ಲಿದ್ದು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ನಾವು ಭದ್ರತೆಗೆಂದು ಕೇವಲ ನಂಬಿಕೆಯ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಮಾರಾಟ ಮಾಡಿದ ನಂತರದಿಂದ ನಾವು ಆಗಲೀ, ನಮ್ಮ ಕುಟುಂಬದವರಾಗಲೀ ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಯೊಂದಿಗಾಗಲೀ, ವಾದಿಯ ತಂಗಿಯ ಮಕ್ಕಳೊಂದಿಗಾಗಲೀ ನಮ್ಮ ಜೊತೆ ಯಾವುದೇ ಚೀಟಿಯ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಯಾವುದೇ ಪ್ರಕಾರದ ಬಡ್ಡಿಯ ಹಣವನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ.

8. ಕ್ರಯಪತ್ರದ ಕಾಲಕ್ಕೆ ಈ ಹಿಂದೆ ದಾವಾಸ್ವತ್ತಿನ ಮೇಲೆ ಬ್ಯಾಂಕಿನಲ್ಲಿ

ಇದ್ದಂತಹ ಸಾಲವನ್ನು ನಾವುಗಳೆ ತೀರಿಸುವುದಾಗಿ ಒಪ್ಪಿ ಕೊಂಡಿದ್ದು, ಅದರಂತೆ ನಾವು ಆ ಸಾಲವನ್ನು ಇದುವರೆಗೂ ತೀರಿಸಿಲ್ಲ ಎಂದರೆ ಸರಿಯಲ್ಲ. ವಾದಿಯು ಸದರಿ ಸಾಲವನ್ನು ತೀರಿಸಲು ಹೋದಾಗ ಬ್ಯಾಂಕಿನವರು ಸಾಲವನ್ನು ತೆಗೆದುಕೊಂಡವರೆ ಬಂದು ತೀರಿಸಬೇಕೆಂದು ಹೇಳಿದ ಮೇರೆಗೆ ಸದರಿ ಸಾಲವು ಇನ್ನೂ ತಿರುವಳಿ ಆಗಿಲ್ಲ ಎಂದರೆ ಸರಿ.

9. ನಮ್ಮ ತಂದೆ 2020ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆಯವರು ಈ ದಾವೆಯಲ್ಲಿ ವಕೀಲರ ಮೂಲಕ ಹಾಜರಾಗಿದ್ದರು. ನಮ್ಮ ತಂದೆಯವರು ಇರುವ ಕಾಲದಲ್ಲಿ ಯಾರು ಈ ಪ್ರಕರಣದಲ್ಲಿ ಪ್ರತಿವಾದ ಪತ್ರ ಸಲ್ಲಿಸಿರಲಿಲ್ಲ ಎಂದರೆ ಸರಿ. ವಾದಿಯು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಮೋಸ ಮಾಡಿ ಖರೀದಿ ಪತ್ರ ಬರೆಸಿಕೊಂಡಿದ್ದಾರೆಂದು ನಾನು ಆಗಲೀ, ನನ್ನ ತಂದೆ ತಾಯಿ ಆಗಲೀ, ನಮ್ಮ ಕುಟುಂಬದವರು ಆಗಲೀ ಅವರ ವಿರುದ್ದ ಯಾವುದೇ ದೂರು ಅಥವಾ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕ್ರಯಪತ್ರವನ್ನು ಪ್ರಶ್ನಿಸಿ ನಾವುಗಳು ಯಾವುದೇ ದಾವೆಯನ್ನು ಸಲ್ಲಿಸಿಲ್ಲ.

10. ದಾವಾಸ್ವತ್ತಿನಲ್ಲಿ ವಾದಿಯೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ವಾದಿಯೇ ಮಾಲೀಕರು, ಹಕ್ಕುದಾರರು ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು, ಅಧಿಕಾರ ಸ್ವಾಧೀನ

ಇಲ್ಲದೆ ಇದ್ದರು ದಾವಾಸ್ವತ್ತನ್ನು ಕಬಳಿಸುವ ದುರುದ್ದೇದಿಂದ ವಾದಿಗೆ ವಿನಾಃ ಕಾರಣ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿದ್ದೇನೆಂದು ತೋರಿಸಲು ಈ ದಾವೆಯಲ್ಲಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**